ದಿನಾಂಕ 15-07-2014 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪರವಾಗಿ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸಿರುತ್ತಾರೆ.

ಸಾಕ್ಷಿಯನ್ನು ಪಿ.ಡಬ್ಲ್ಯೂ-1 ಎಂದು ವಿಚಾರಣೆ ಮಾಡಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಕುಮಾರಿ ಹೆಚ್.ಆರ್.ಎನ್. ವಕೀಲರಿಂದ.

ಸರ್ವೆನಂ.28/3, 28/5 ಬೂವನಹಳ್ಳಿಯ ಪಹಣಿಗಳನ್ನು ಹಾಜರುಪಡಿಸಿದ್ದು ನಿಶಾನೆ ಪಿ-1 ಮತ್ತು 2 ಎಂದು, ಎಸಿ ನ್ಯಾಯಾಲಯದಲ್ಲಿ ಆದಂತಹ ಆರ್ಎ ನಂ. 3/08ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿಶಾನೆ ಪಿ-3 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವನ್ನು ಕೋರಿರುತ್ತಾರೆ, ಸಮಯನ್ನುನೀಡಿ ಮುಂದೂಡಲಾಯಿತು)

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.
ಸಿವಿಲ್ ಜಡ್ಜ್ ಮತ್ತು ಜೆಎಂಎಫ್ಸಿ.,
ಹೊಳೆನರಸೀಪುರ.

ದಿನಾಂಕ 15/07/2014 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್.ಎ. ವಕೀಲರಿಂದ

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ಗೊತ್ತಿದೆ. ವಾದಿ ಮತ್ತು ಪ್ರತಿವಾದಿಯರು ಗೊತ್ತು. ಪ್ರತಿವಾದಿ ಮಲ್ಲಪ್ಪನಿಗೆ ನೀವು ದಾಯಾದಿಗಳು ಎಂದರೆ ಸರಿ. ಸರ್ವೆ ನಂ.70, ಬೆಟ್ಟದಸಾತೇನಹಳ್ಳಿಯ ಜಮೀನು ಸುಮಾರು 35 ಎಕರೆ ಇರುತ್ತದೆ. ಸರ್ವೆ ನಂ.70 ಎಷ್ಟು ಪೋಡಾಗಿದೆ ಎಂದು ಗೊತ್ತಿಲ್ಲ. ಸರ್ವೆ ನಂ.70 ರಲ್ಲಿ ನಮ್ಮ ಆಸ್ತಿ ಇಲ್ಲ. ವಾದಿ ಪ್ರತಿವಾದಿ ಮೇಲೆ ಏನು ಪರಿಹಾರ ಕೇಳಿ ಕೇಸು ಹಾಕಿದ್ದಾರೆಂದು ಗೊತ್ತಿಲ್ಲ. ದಾವಾದಲ್ಲಿ ಹೇಳಿರುವಂತಹ ಚಕ್ಕುಬಂದಿಯಲ್ಲಿ ಯಾವುದೇ ಜಮೀನು ಇಲ್ಲ. ಪ್ರತಿವಾದಿಯ ಜಮೀನು ಸರ್ವೆ ನಂ.70 ರಲ್ಲಿ ಇದೆ ಆದರೆ ಪೋಡು ಗೊತ್ತಿಲ್ಲ. ಸುಮಾರು ಐದಾರು ಎಕರೆ ಜಮೀನು ಇರುತ್ತದೆ.

2) ಪ್ರತಿವಾದಿಯ ಜಮೀನಿನ ಚಕ್ಕುಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಕುಮಾರನ ಜಮೀನು, ಉತ್ತರಕ್ಕೆ ಕಲ್ಲಮ್ಮನ ಜಮೀನು, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಕುಮಾರನ ಜಮೀನು ಇರುತ್ತದೆ. ಮೇಲೆ ಹೇಳಿದ ಚಕ್ಕುಬಂದಿಯ ಸುತ್ತ ವಾದಿಯ ಜಮೀನು ಇಲ್ಲ. ನಾನು ಸರ್ವೆ ನಂ.70ಕ್ಕೆ

ಸಂಬಂಧಪಟ್ಟ ರೆವಿನ್ಯೂ ದಾಖಲಾತಿಯನ್ನು ನೋಡಿಲ್ಲ. ನಾವು ಕೂಲಿಗೆ ಹೋಗಿದ್ದೇವೆ ಅದರ ಆಧಾರದ ಮೇಲೆ ಸಾಕ್ಷಿ ಹೇಳುತ್ತಿದ್ದೇನೆ. ವಾದಿಯರಿಗೆ ಮೂರು ಜನ ಸಹೋದರರು. ಮೂರು ಜನ ಸಹೋದರರು ಆಸ್ತಿಯನ್ನು ಬೇರೆಬೇರೆ ಮಾಡಿಕೊಂಡಿದ್ದಾರೆಂದರೆ ಗೊತ್ತಿಲ್ಲ. ಸರ್ವೆ ನಂ.70/7ರಲ್ಲಿ ವಾದಿಗೆ 18 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಅದನ್ನು ವಾದಿ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ನೀವು ಯಾವುದೇ ದಾಖಲಾತಿ ನೋಡಿಲ್ಲ ಅದ್ದರಿಂದ ದಾವಾದ ಆಸ್ತಿ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾದಲ್ಲಿ ನಮೂದಿಸಿರುವ ಚಕ್ಕುಬಂದಿಯಲ್ಲಿ ವಾದಿಯ ಆಸ್ತಿ ಇದೆ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3) ನಾನು ಪ್ರಮಾಣ ಪತ್ರವದಲ್ಲಿ ವಾದಿ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದು ಬರೆಸಿಲ್ಲ. ನಾನು ಪ್ರತಿವಾದಿ ಮನೆಗೆ ಕೆಲಸ ಇದ್ದಾಗ ಮಾತ್ರ ಕೂಲಿಗೆ ಹೋಗುತ್ತೇನೆ. ಪ್ರತಿವಾದಿ ಬಳಿ ಕೂಲಿಗೆ ಹೋಗುತ್ತಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಏನು ಇಲ್ಲ

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.

ದಿನಾಂಕ 15/07/2014 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ ಆರ್.ಎಸ್. ವಕೀಲರಿಂದ

ನಾನು ವಿದ್ಯಾಭ್ಯಾಸ ಮಾಡಿಲ್ಲ. ಸಹಿ ಮಾಡಲು ಬರುತ್ತದೆ. ಕರಿಯ ಬಿನ್ ಮರಿಕಾಳ ಎಂದರೆ ನನ್ನ ತಾತನ ಅಪ್ಪ. ಅವರಿಗೆ ಮೂರು ಜನ ಮಕ್ಕಳು. ಕರೀಗೌಡ ಮತ್ತು ಮೊಪೇಗೌಡ ಮತ್ತು ಇನ್ನೊಬ್ಬರು ಹೆಸರು ಗೊತ್ತಿಲ್ಲ. ಕರಿಗೌಡ ಹಿರಿಯರು. ಕರಿಗೌಡನಿಗೆ ಇಬ್ಬರು ಮಕ್ಕಳು. ಕೆಂಗೇಗೌಡ ಮತ್ತು ಜವರೇಗೌಡ ಎಂದು. ಕೆಂಗೇಗೌಡರ ಮಗನ ಹೆಸರು ಅಣ್ಣೇಗೌಡ. ಜವರೇಗೌಡನಿಗೆ ಇಬ್ಬರು

ಮಕ್ಕಳು. ಅವರ ಹೆಸರು ನೆನಪಿಲ್ಲ. ಜವರೇಗೌಡನ ಮಗನ ಹೆಸರು ಜವರೇಗೌಡ ಎಂದರೆ ಇರಬಹುದು.

2) ವಾದಿ ಜಮೀನು ನಮ್ಮದು ಎಂದು ಕೇಸು ಹಾಕಿರುತ್ತಾರೆ. ದಾವಾ ಆಸ್ತಿ ಸರ್ವೆ ನಂ.76/5. ಸದರಿ ಆಸ್ತಿ ಕರೀಗೌಡನ ಹೆಸರಿಗೆ ಪಹಣಿ ಬರುತ್ತದೆ. ಕರೀಗೌಡ ವಾದಿಯರ ತಾತ ಎಂದರೆ ಸರಿ. ಕರೀಗೌಡರ ಹೆಸರಿನಿಂದ ಕೆಂಗೇಗೌಡರ ಹೆಸರಿಗೆ ಪಹಣಿ ಬಂತು ಎಂದರೆ ಸರಿಯಲ್ಲ. ನನ್ನ ಅಜ್ಜನ ಹೆಸರು ಮೊಪೇಗೌಡ. ಕೆಂಗೇಗೌಡರ ಹೆಸರಿಗೆ ಖಾತೆ ಬಂದ ಮೇಲೆ ಅವರೇ ಸ್ವಾಧೀನದಲ್ಲಿ ಇದ್ದರು ಎಂದರೆ ಅವರು ನಾಲ್ಕು ಗುಂಟೆ ಸ್ವಾಧೀನದಲ್ಲಿದ್ದಾರೆ, ನಾನು ನಾಲ್ಕು ಗುಂಟೆ ಸ್ವಾಧೀನದಲ್ಲಿದ್ದೇನೆ ಎಂದು ಹೇಳುತ್ತಾರೆ. ಕೆಂಗೇಗೌಡರು ತೀರಿಕೊಂಡಿದ್ದಾರೆ. ಕೆಂಗೇಗೌಡ ತಿಡೀರಿಕೊಂಡ ನಂತರ ಅವರ ಮಕ್ಕಳು ತಲಾ ನಾಲ್ಕು ಗುಂಟೆ ಅನುಭವಿಸಿಕೊಂಡು ಬರುತ್ತಿದ್ದಾರೆಂದರೆ ಸರಿಯಲ್ಲ. 4ವರೆ ಗುಂಟೆಯಲ್ಲಿ 1ನೇ ವಾದಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. 2ನೇ ವಾದಿ ಉಳಿದ ನಾಲ್ಕುವರೆ ಗುಂಟೆಯಲ್ಲಿ ಮನೆ ಕಟ್ಟಿಕೊಂಡಿದ್ದಾರೆಂದರೆ ಸಾಕ್ಷಿಯು ಅವನು ಖರೀದಿಸಿದ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾನೆ ಎನ್ನುತ್ತಾರೆ.

3) ದಾವಾದ ಆಸ್ತಿ ಕಚ್ಚಾ ನಕ್ಷೆಯಲ್ಲಿ ತೋರಿಸಿದಂತೆ ವಾದಿಯರು ದನಕುರುಗಳನ್ನು ಕಟ್ಟಲುಜಾಗ ಬಿಟ್ಟು ಕೊಂಡಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನಮ್ಮ ಜಾಗ ಎನ್ನುತ್ತಾರೆ. ನಮ್ಮಜಾಗ ಎಂದು ತೋರಿಸಲು ದಾಖಲಾತಿಗಳನ್ನು ಕೊಟ್ಟಿದ್ದೇನೆ. 9 ಗುಂಟೆ ಸರ್ವೆ ನಂ.76/5 ರಲ್ಲಿ ಬರುತ್ತದೆ ಎಂದರೆ ಸರಿ. ನಾವು ಸರ್ವೆ ನಬಂ. ಜಮೀನಿನಲ್ಲಿ ಕಟ್ಟಡ ಕಟ್ಟಲು ಪರವಾನಗಿ ಪಡೆದುಕೊಂಡಿದ್ದೇನೆ. ನಿಮ್ಮ ಅಜ್ಜನ ಹೆಸರಿಗೆ ಯಾವುದೇ ಖಾತೆ ವಗೈರೆ ಇಲ್ಲ ಎಂದರೆ ಸರಿ. ನಿಮ್ಮ ಹೆಸರಿಗೂ ಖಾತೆ ವಗೈರೆ ಇಲ್ಲ ಎಂದರೆ ಸರಿ.

4) ನಿಶಾನೆ ಡಿ-3 ಸರ್ವೆ ನಂಬರಿಗೆ ಸಂಬಂಧಪಟ್ಟಂತ ದಾಖಲೆ. ನಿಶಾನೆ ಡಿ-3ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಂಶವೃಕ್ಷವನ್ನು ಗ್ರಾಮ ಲೆಕ್ಕಿಗ ನಮ್ಮ ಊರಿಗೆ ಬಂದು ವಿಚಾರಿಸಿ ಕೊಟ್ಟಿದ್ದಾರೆ. ವಾದಿಯರಿಬ್ಬರೂ ತಲಾ ನಾಲ್ಕುವರೆ ನಾಲ್ಕುವರೆ ಗುಂಟೆ ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ನೀವು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಮತ್ತು ಅಧ್ಯಕ್ಷರನ್ನು ಷರೀಕು ಮಾಡಿಕೊಂಡು ಸುಳ್ಳು ಖಾತೆ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನೀವು ಕಟ್ಟಡ ಪರವಾನಗಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಮ್ಮ ಜಮೀನನ್ನು ಸರ್ವೆ ಮಾಡಿಸುವ ಅವಶ್ಯಕತೆ ಇಲ್ಲ.

ವಾದಿಯರು ಅವರ ಜಮೀನನ್ನು ಬೇಕಾದರೆ ಅಳತೆ ಮಾಡಿಸಿಕೊಳ್ಳಲ್ಲಿ ಎನ್ನುತ್ತಾರೆ. ವಾದಿಯರ ಸ್ವಾಧೀನಕ್ಕೆ ನೀವು ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಏನು ಇಲ್ಲ

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.